

## ಕರಿಬೇವು ನೆಂಟ; ಈ ಭಂಟ



ನನ್ನಾಕೆ ಮುಂಜಾವಿಗೆ ಮಾಡಿದ್ದ ತಿಂಡಿಯ ಅಂತಿಮ ಸ್ಪರ್ಶಕ್ಕೆ, ‘ಒಗ್ಗರಣೆಗೆ ಕರಿಬೇವು ಬೇಕಿದೆ; ಹಿತ್ತಲಲ್ಲಿನ ಕುಂಡದಲ್ಲಿರುವ ಗಿಡದಿಂದ ಕಿತ್ತು ತನ್ನಿ’ ಎಂದು ಫರ್ಮಾನು ಹೊರಡಿಸಿದಳು. ಅತ್ತ ಮುಖ ಮಾಡಿದಾಗ ಕುಂಡದಲ್ಲಿ ಬರಿ ಗಿಡವಿತ್ತು, ಕರಿಬೇವಿನ ಎಲೆಗಳೇ ಬಹುತೇಕ ಮಾಯವಾಗಿದ್ದವು. ಆ ಬಗ್ಗೆ ಹೆಂಡತಿಗೆ ತಿಳಿಸಿದಾಗ, ‘ಅರೆ, ನಿನ್ನ ಸಂಜೆ ನೋಡಿದಾಗ ಗಿಡದ ತುಂಬಾ ಎಲೆಗಳು ಇದ್ದವಲ್ಲವೇ’ ಎಂದು ಯೋಚಿಸತೊಡಗಿದಳು. ನಾನೂ ಆ ಗಿಡದತ್ತ ಸೂಕ್ಷ್ಮವಾಗಿ ಗಮನಿಸಿದಾಗ ಗಿಡದ ಕೊನೆಯಲ್ಲಿ ನಾಲ್ಕು ದಂಟಿರುವ ಎಲೆಯಲ್ಲಿ; ಎಲೆ ತಿನ್ನುವ ಹಸಿರು ಕಳ್ಳನೊಬ್ಬ ಅವಿತಿದ್ದ. ಆ ಕಳ್ಳನ ಹೆಸರು ‘ಕ್ಯಾಟರ್ ಪಿಲ್ಲರ್’ ಲಾರ್ವಾ (ಸಬಾಡರ್ ಸಿಂಫಿಟಾ).

ಈ ಕೀಟದ ಕುತ್ತಿಗೆಯಲ್ಲಿ ಚೆನ್ನದ ಹಾರದಂತೆ ಪಟ್ಟಿಯಿದ್ದು, ಇದರ ತೀಕ್ಷ್ಣ ಕಣ್ಣುಗಳು ಗಮನ ಸೆಳೆಯುತ್ತವೆ. ಅಕ್ಕಪಕ್ಕ ಬೇರೆ ಗಿಡಗಳು ಇದ್ದರೂ ಅವುಗಳತ್ತ ಸುಳಿಯದೇ ಕರಿಬೇವು ಗಿಡದ ಎಲೆಗಳನ್ನೇ ತಿಂದು ತೇಗಿದ್ದ ಈ ಕೀಟವು, ಅಲ್ಲಿಯೇ ನಿದ್ರೆಗೆ ಜಾರಿದಂತಿತ್ತು.

–ನಗರ ಗುರುದೇವ್ ಭಂಡಾರ್ಕರ್, ಹೊಸನಗರ

## ಯೂರೋಪಿನಲ್ಲಿ ಹಾವುಗಳ ಆರಾಧನೆ

ನಾಗರ ಪಂಚಮಿ ದಿನದಂದು ಹಾವಿನ ಹುತ್ತಕ್ಕೆ ಅಥವಾ ನಾಗರ ಹಾವಿನ ಮೂರ್ತಿಗಳಿಗೆ ಹಾಲೆರೆದು ಪೂಜಿಸುವ ಪದ್ಧತಿ ನಮ್ಮ ದೇಶದಲ್ಲಿದೆ. ಕೆಲವು ಪ್ರದೇಶಗಳಲ್ಲಿ ಜೀವಂತ ಹಾವುಗಳನ್ನು ಪೂಜಿಸುವವರೂ ಇದ್ದಾರೆ. ವಿಶ್ವದ ಹಲವು ದೇಶಗಳಲ್ಲೂ ಹಾವುಗಳನ್ನು ಪೂಜಿಸುವ ಪದ್ಧತಿ ಇತ್ತೆಂದು ನಮಗೆ ಇತಿಹಾಸದಿಂದ ತಿಳಿದುಬರುತ್ತದೆ.

ಜೆಕ್ ಗಣರಾಜ್ಯದ ರಾಜಧಾನಿ ‘ಪ್ರಾಗ್’ (Prague) ನಗರದ ಪ್ರವಾಸದ ಸಮಯದಲ್ಲಿ ‘ಲೆಸ್ಸರ್ ಟೌನ್’ ಪ್ರದೇಶದ ಪೆಟ್ರಿನ್ ಹಿಲ್ ನಲ್ಲಿರುವ ‘ಮಿನಿ ಐಫೆಲ್ ಟವರ್’ ವೀಕ್ಷಿಸಲು ಹೋದೆವು. ಬೆಟ್ಟದ ಮೆಟ್ಟಿಲುಗಳನ್ನು ಹತ್ತುವಾಗ ಕಲ್ಲಿನ ಗೋಡೆಯ ಮೇಲೆ ಕೆತ್ತಲಾಗಿರುವ ಹಾವುಗಳ ಶಿಲ್ಪ ನಮ್ಮನ್ನು ಆಕರ್ಷಿಸಿತು. ಸುಮಾರು ಆರು ಅಡಿಗಳಷ್ಟು ಎತ್ತರವಿರುವ ಎರಡು ಹಾವುಗಳು ಬೆಸೆದುಕೊಂಡಿರುವ ಶಿಲ್ಪದಲ್ಲಿ ಹಾವುಗಳು ಬಾಯಿ ತೆರೆದುಕೊಂಡಂತೆ ಕೆತ್ತಲಾಗಿತ್ತು. ಪುರಾತನ ಯೂರೋಪಿನಲ್ಲಿ ಸರ್ಪ ಪೂಜೆಯು ಪ್ರಸಿದ್ಧಿ ಪಡೆದಿತ್ತು. ಜೋಡಿ ಹಾವುಗಳು ಒಡೆಯ ಮತ್ತು ಒಡತಿಯ ಸಂಕೇತವಾಗಿದ್ದು, ಮಕ್ಕಳು ಮತ್ತು ಜಾನುವಾರುಗಳನ್ನು ರಕ್ಷಿಸುತ್ತವೆಂದು ನಂಬುತ್ತಿದ್ದರು. ಯೂರೋಪಿನ ಕೆಲವು ಭಾಗಗಳಲ್ಲಿ ಜೋಡಿ ಹಾವುಗಳನ್ನು ಸಾಕುವ ಪದ್ಧತಿಯಿತ್ತಂತೆ.

–ಜಿ. ನಾಗೇಂದ್ರ ಕಾವೂರು, ಸಂಡೂರು





## ಶಿವ ಪರಿವಾರದ ಶಿಲ್ಪ

ಶಿವನ ಪರಿವಾರವಿರುವ ಈ ಅಪರೂಪದ ಶಿಲ್ಪವು ಅಮೆರಿಕದ ಶಿಕಾಗೊ ನಗರದಲ್ಲಿರುವ ಆರ್ಟ್ ಗ್ಯಾಲರಿಯಲ್ಲಿದೆ. ಇದರಲ್ಲಿ ಪಾರ್ವತಿಯೊಂದಿಗೆ ನಂದಿ ಮೇಲೆ ಕುಳಿತ ಶಿವ, ಮೇಲೆ ಬ್ರಹ್ಮ, ಲಕ್ಷ್ಮಿಯೊಂದಿಗಿರುವ ವಿಷ್ಣು, ಕೆಳಗೆ ಎರಡೂ ಕಡೆ ಗಣಪತಿ, ಕಾರ್ತಿಕೇಯ ಹಾಗೂ ಶಿವಗಣಗಳನ್ನು ನೋಡಬಹುದು. ಈ ಶಿಲ್ಪವು 9ನೇ ಶತಮಾನಕ್ಕೆ ಸೇರಿದ ಮಧ್ಯಪ್ರದೇಶದ ಶಿಲ್ಪವಾಗಿದೆ. ಮರಳುಗಲ್ಲಿನಲ್ಲಿ ಕೆತ್ತಲ್ಪಟ್ಟಿರಿವ ಇದು ಶಿವ ಪಾರ್ವತಿ ವಿವಾಹದ ನಂತರ ಕೈಲಾಸಕ್ಕೆ ಹೊರಟ ಚಿತ್ರಣವನ್ನು ನೆನಪಿಸುತ್ತಿದೆ.

–ಸೀತಾ ಎಸ್. ನಾರಾಯಣ, ಹರಿಹರ